# ಸ್ವಾತಂತ್ರ್ಯ ಪೂರ್ವ ಮೈಸೂರು ಪರಿಸರದ ಕನ್ನಡ ಪ್ರಕಟಣಾ ಸಂಸ್ಥೆಗಳು

**ರಘು ಎನ್.ಎ.***

**DOI: https://doi.org/10.5281/zenodo.21794101**

**ABSTRACT**

ಸ್ವಾತಂತ್ರ್ಯ ಪೂರ್ವದ ಮೈಸೂರು ಪ್ರಾಂತ್ಯದಲ್ಲಿ ಕನ್ನಡ ಸಾಹಿತ್ಯದ ಪುನರುಜ್ಜೀವನ ಮತ್ತು ಬೆಳವಣಿಗೆಯಲ್ಲಿ ಮುದ್ರಣಾಲಯಗಳು ಹಾಗೂ ಪ್ರಕಟಣಾ ಸಂಸ್ಥೆಗಳು ವಹಿಸಿದ ಐತಿಹಾಸಿಕ ಪಾತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಒಡೆಯರ ಆಡಳಿತ, ಬ್ರಿಟಿಷ್ ಆಡಳಿತ ಹಾಗೂ ಕ್ರೈಸ್ತ ಮಿಷನರಿಗಳ ಆಗಮನದ ಹಿನ್ನೆಲೆಯಲ್ಲಿ ಕನ್ನಡ ಮುದ್ರಣ ಕಾರ್ಯವು ಆರಂಭವಾಯಿತು. ಧರ್ಮ ಪ್ರಚಾರ ಹಾಗೂ ಶೈಕ್ಷಣಿಕ ಉದ್ದೇಶಗಳಿಗಾಗಿ ಮಿಷನರಿಗಳು ಮುದ್ರಣಯಂತ್ರಗಳನ್ನು ಸ್ಥಾಪಿಸಿದರೆ, ನಂತರದ ದಿನಗಳಲ್ಲಿ ಅಂಬವಿಲಾಸ ಅರಮನೆಯ ಶಿಲಾಯಂತ್ರ, ವೆಸ್ಲಿಯನ್ ಪ್ರೆಸ್, ಸದ್ವಿದ್ಯಾ ಮಂದಿರ ಮುದ್ರಾಶಾಲೆ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಹಲವು ದೇಶೀಯ ಸಂಸ್ಥೆಗಳು ಈ ಕಾರ್ಯವನ್ನು ಮುಂದುವರೆಸಿದವು. ಓಲೆಗರಿಗಳು ಹಾಗೂ ಹಸ್ತಪ್ರತಿಗಳಲ್ಲಿದ್ದ ಪ್ರಾಚೀನ ಕಾವ್ಯಗಳು, ಶಾಸನಗಳು ಮತ್ತು ಧಾರ್ಮಿಕ ಗ್ರಂಥಗಳನ್ನು ಹುಡುಕಿ, ಪರಿಷ್ಕರಿಸಿ, ಮುದ್ರಿಸುವ ಮೂಲಕ ಈ ಸಂಸ್ಥೆಗಳು ಕಣ್ಮರೆಯಾಗುತ್ತಿದ್ದ ಅಸಂಖ್ಯಾತ ಕೃತಿಗಳನ್ನು ಸಂರಕ್ಷಿಸಿ, ನಾಡಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪರಂಪರೆಯನ್ನು ಶ್ರೀಮಂತಗೊಳಿಸಿದ ಬಗೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ.

**KEYWORDS:** ಪ್ರಕಟಣಾ ಸಂಸ್ಥೆಗಳು, ಸ್ವಾತಂತ್ರ್ಯ ಪೂರ್ವ ಮೈಸೂರು, ಮುದ್ರಣಾಲಯಗಳು, ಕ್ರೈಸ್ತ ಮಿಷನರಿಗಳು, ಕನ್ನಡ ಸಾಹಿತ್ಯ ಪುನರುಜ್ಜೀವನ.

* **ರಘು ಎನ್.ಎ.,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಕರ್ನಾಟಕದ ಒಂದು ಭಾಗವಾದ ಮೈಸೂರು ಪರಿಸರಕ್ಕೆ ತನ್ನದೇ ಆದ ಇತಿಹಾಸವಿದೆ. ಮೈಸೂರು ಪರಿಸರವನ್ನು ಹಲವಾರು ರಾಜಮನೆತನಗಳು ಆಳ್ವಿಕೆ ನಡೆಸಿದ್ದಾನೆ. ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ಅದರ ಅಡಿಯಲ್ಲಿದ್ದ ಪಾಳೆಪಟ್ಟು ಪ್ರಾಂತ್ಯಗಳೆಲ್ಲಾ ಸ್ವತಂತ್ರವಾದವು. ಮೈಸೂರು ಸಂಸ್ಥಾನವು ಅವುಗಳಲ್ಲಿ ಒಂದು. ಸ್ವತಂತ್ರ ಪೂರ್ವದಲ್ಲಿ ಒಡೆಯರ ವಂಶದವರು ಮೈಸೂರು ಸಂಸ್ಥಾನವನ್ನು ಸ್ಥಾಪಿಸಿ ಆಳ್ವಿಕೆ ನಡೆಸುತ್ತಿದ್ದರು. ನಂತರ ಮೈಸೂರು ಪರಿಸರವು ಹೈದರಾಲಿ ಹಾಗೂ ಅವನ ಮಗನಾದ ಟಿಪ್ಪುಸುಲ್ತಾನನ ಆಳ್ವಿಕೆಗೆ ಒಳಪಟ್ಟಿತು. ನಾಲ್ಕನೇ ಆಂಗ್ಲೋ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತ ನಂತರ ಮೈಸೂರು ಸಂಸ್ಥಾನವನ್ನು ಬ್ರಿಟೀಷರು ವಶಪಡಿಸಿಕೊಂಡು ಮೈಸೂರು ಪ್ರಾಂತ್ಯವೆಂದು ವಿಭಾಗಿಸಿ (ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ) ಒಟ್ಟು ಒಂಬತ್ತು ಜಿಲ್ಲೆಗಳನ್ನು ಸೇರಿಸಿ ಆಡಳಿತ ನಡೆಸಲು ಶುರುಮಾಡಿದರು.

ಮೈಸೂರು ಪ್ರಾಂತ್ಯವು ಸ್ವಾತಂತ್ರ್ಯ ಪೂರ್ವದಲ್ಲಿ ತನ್ನದೇಯಾದ ಗಡಿಭಾಗವನ್ನು ಹೊಂದಿತ್ತು. ಮೈಸೂರು ಪ್ರಾಂತ್ಯದಲ್ಲಿ ಕ್ರೈಸ್ತ ಮಿಷನರಿಗಳು ತಮ್ಮ ಧರ್ಮವನ್ನು ಪ್ರಚಾರ ಪಡಿಸುವ ಮೂಲ ಉದ್ದೇಶವನ್ನು ಇಟ್ಟುಕೊಂಡು ಬಂದರು. ಇಲ್ಲಿನ ಸ್ಥಳೀಯ ಭಾಷೆಯನ್ನು ಕಲಿತುಕೊಂಡರೆ ಧರ್ಮ ಪ್ರಚಾರದ ಹಾದಿ ಸುಲಭವಾಗುತ್ತದೆ ಎಂದು ಅರಿತುಕೊಂಡು ಸ್ಥಳೀಯ ಭಾಷೆಯನ್ನು ಕಲಿಯ ತೊಡಗಿದರು. ಮಿಷನರಿಗಳು ಮೊದಲಿಗೆ ಶಾಲೆಗಳನ್ನು ತೆರೆದರು. ಮಕ್ಕಳಿಗೆ ಪಠ್ಯಪುಸ್ತಕದ ಅವಶ್ಯಕತೆಯಿಂದಾಗಿ ಕೈಬರಹದ ಹೊತ್ತಿಗೆಗಳು ಸಾಕಷ್ಟು ಲಭ್ಯವಾಗದಿದ್ದ ಕಾರಣ ತಮ್ಮ ದೃಷ್ಟಿಯನ್ನು ಮುದ್ರಣಯಂತ್ರಗಳತ್ತ ನೆಟ್ಟರು.

ಹೀಗೆ ಕರ್ನಾಟಕಕ್ಕೆ ಬಂದ ಮಿಷನರಿಗಳು ಹಾಗೂ ದೇಶಿಯರ ಸಂಚಾರದಿಂದ ಅವರಿಗೆ ದೊರೆತ ಓಲೆಗರಿ, ಭೂರ್ಜಪತ್ರ, ಕಡತ, ಕರಡು ಕಾಗದ, ಶಾಸನಗಳನ್ನು ಹುಡುಕಿ ತಂದು ಅವುಗಳನ್ನು ಮೇಲೆ ಇದ್ದ ಸಾಹಿತ್ಯವನ್ನು ಮುದ್ರಣಯಂತ್ರಗಳ ಮೂಲಕ ಮುದ್ರಿಸಿ ಪ್ರಕಟಿಸಿದರು. ಇದರಿಂದ ಕನ್ನಡ ಸಾಹಿತ್ಯ ಇತಿಹಾಸವನ್ನು ಕೆದಕಿ ಪುನಃ ಸೃಷ್ಟಿಸಿದಂತಾಯಿತು. ಹಾಗಾಗಿ ಇದನ್ನು ಕನ್ನಡ ಸಾಹಿತ್ಯದ ಪುನರುಜ್ಜೀವನವೆಂದೇ ಹೇಳಬಹುದು.

ಮಿಷನರಿಗಳ ಕನ್ನಡ ಸಾಹಿತ್ಯದ ಪ್ರಕಟಣಾ ಸೇವೆಯಿಂದ ಕನ್ನಡಿಗರ ಸಂಸ್ಕೃತಿಯನ್ನು ತಿಳಿಯಲು ಪ್ರೇರಕವಾಯಿತು ಹಾಗೂ ಕನ್ನಡ ಸಾಹಿತ್ಯವು ಶ್ರೀಮಂತಗೊಂಡಿತು. ಮೈಸೂರು ಪ್ರಾಂತ್ಯದಲ್ಲಿ ಬ್ರಿಟೀಷರು ತಮ್ಮ ಅಧಿಕೃತ ವರದಿಗಳನ್ನು ಮತ್ತು ಆಡಳಿತದ ವರದಿಗಳನ್ನು ಪ್ರಕಟಿಸುವ ಅವಶ್ಯಕತೆಯಿಂದಾಗಿ ಮುದ್ರಣಾಲಯಗಳು ಮೈಸೂರು ಪ್ರಾಂತ್ಯದ ಭಾಗದಲ್ಲಿ ತಲೆ ಎತ್ತಿದ್ದವು. ತದನಂತರ ಪ್ರತ್ಯೇಕವಾಗಿಯೇ ಸ್ಥಳೀಯರು ಮುದ್ರಣಾಲಯಗಳನ್ನು ಸ್ಥಾಪಿಸಿಕೊಂಡರು. ಹೀಗೆ ಮೈಸೂರು ಪ್ರಾಂತ್ಯದಲ್ಲಿ ಶುರುವಾದ ಮುದ್ರಣ ಸಂಸ್ಥೆಗಳ ಸ್ಥಾಪಕರೇ ಮೊದಲಿಗೆ

ಪ್ರಕಟಣಾ ಕಾರ್ಯವನ್ನು ಕೈಗೊಂಡರು. ಅಂತಹ ಪ್ರಮುಖವಾದ ಪ್ರಕಟಣಾ ಸಂಸ್ಥೆಗಳನ್ನು ಈ ಕೆಳಗಿನಂತೆ ನೋಡಬಹುದು.

### 1. ಅಂಬವಿಲಾಸ ಅರಮನೆಯ ಶಿಲಾಯಂತ್ರ

ಈ ಮುದ್ರಣ ಯಂತ್ರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ ಆಡಳಿತದಲ್ಲಿ ಮತ್ತು ಅವರ ಪ್ರೋತ್ಸಾಹದಿಂದ "ಕ್ರಿ.ಶ.1841–42ರ ಅವಧಿಯಲ್ಲಿ ಅಂಬವಿಲಾಸ ಅರಮನೆಯಲ್ಲಿ"[1] ಸ್ಥಾಪಿಸಲಾಗಿದೆ. ಮುಮ್ಮಡಿ ಕೃಷ್ಣರಾಜರು ಮುದ್ರಣಯಂತ್ರವನ್ನು ಅರಮನೆಯಲ್ಲಿ ಸ್ಥಾಪಿಸಿದ್ದರಿಂದ ಹಲವಾರು ಗ್ರಂಥಗಳು ಪ್ರಥಮವಾಗಿ ಮುದ್ರಣಗೊಂಡು ಹೊರಬಂದವು. ಸಾಹಿತ್ಯದ ರಚನೆಗೆ ಅರಮನೆಯವರಿಂದ ಪ್ರೋತ್ಸಾಹ ದೊರಕಿತು. ಇದರಿಂದ ಹಲವಾರು ಕನ್ನಡಿಗರು ಸಾಹಿತ್ಯ ರಚನೆಯ ಕೃಷಿಯಲ್ಲಿ ತೊಡಗಿದರು. ಇದರಲ್ಲಿ ಮುಮ್ಮಡಿ ಕೃಷ್ಣರಾಜರು ರಚಿಸಿದ ಕೃತಿಗಳು ಚಿತ್ರಸಹಿತವಾಗಿ ಪ್ರಕಟಗೊಂಡಿವೆ. ಕ್ರಿ.ಶ.1852ರಲ್ಲಿ 'ಸಂಖ್ಯಾ ರತ್ನಕೋಶ' ಎಂಬ ಮರಾಠಿ ಕೃತಿಯು ಈ ಶಿಲಾಯಂತ್ರದಲ್ಲಿ ಅಚ್ಚಾಗಿದೆ. 'ಸೌಗಂಧಿಕ ಪರಿಣಯ' ಕಾದಂಬರಿಯು ಕ್ರಿ.ಶ.1860ರಲ್ಲಿ ಪ್ರಕಟವಾಯಿತು. 'ಶ್ರೀ ತತ್ವನಿಧಿ ನಂಜುಂಡ ಶತಕ' ಮತ್ತು 'ಆಧ್ಯಾತ್ಮ ರಾಮಾಯಣ ಟೀಕೆ', ಮುಂತಾದ ಕನ್ನಡ ಕೃತಿಗಳು ಮತ್ತು ಸಂಸ್ಕೃತಕ್ಕೆ ಸಂಬಂಧಿಸಿದ ಪುಸ್ತಕಗಳು ಅಚ್ಚಾಗಿ ಪ್ರಕಟಗೊಂಡಿವೆ.

### 2. ಮೈಸೂರಿನ ವೆಸ್ಲಿಯನ್ ಮಿಷನ್ ಪ್ರೆಸ್ ಅಂಡ್ ಪಬ್ಲಿಷಿಂಗ್ ಹೌಸ್

ಇದನ್ನು ಹೆನ್ರಿಹೇಗ್ ಎಂಬುವವನು ಕ್ರಿ.ಶ.1890ರ ದಶಕದಲ್ಲಿ ಸ್ಥಾಪಿಸಿದನು. ಈ ಪ್ರೆಸ್‌ನಲ್ಲಿ ಸ್ವಮತಿಯ ಪುಸ್ತಕಗಳಲ್ಲದೆ ಹಳಗನ್ನಡ ಕಾವ್ಯಗಳು ಹಾಗೂ ಹೊಸಗನ್ನಡ ಗ್ರಂಥಗಳು ಈ ಅಚ್ಚುಕೂಟದಿಂದ ಮುದ್ರಿತವಾಗಿ ಹೊರಬಂದವು. ಈ ಪ್ರೆಸ್ ನಲ್ಲಿ 'ಮೈಸೂರು ವೃತ್ತಾಂತ', 'ಕನ್ನಡ ಲಾ ರಿಪೋರ್ಟು', 'ಬೋಧಕ ಬೋಧಿನಿ' ಎಂಬ ವಾರಪತ್ರಿಕೆಗಳು ಪ್ರಕಟವಾಗುತ್ತಿತ್ತು. ಇದರ ಸಂಪಾದಕರು ಹೆನ್ರಿಹೇಗ್ ಅವರೇ ಆಗಿದ್ದರು. ಇಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಸಂಪಾದನ ಕೃತಿಗಳೂ, ಅನುವಾದ ಕೃತಿಗಳೂ, ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಕೃತಿಗಳನ್ನು ಸಹ ಪ್ರಕಟಿಸಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಅನೇಕ ಗ್ರಂಥಗಳನ್ನು ಸಹ ಪ್ರಕಟಿಸಿ ಮಾರಾಟ ಮಾಡುತ್ತಿದ್ದರು.

### 3. ಕೆಥೋಲಿಕ್ ಮಿಷನರಿ ಪ್ರೆಸ್

ಈ ಮುದ್ರಣಾಲಯವನ್ನು ಬೆಂಗಳೂರಿನಲ್ಲಿ "ಎಲ್.ಚಾರ್ಬೋನ ಎಂಬ ಧರ್ಮಗುರು ಕ್ರಿ.ಶ.1850"[2] ರಲ್ಲಿ ಸ್ಥಾಪಿಸಿದನು. ಈ ಪ್ರೆಸ್ ಸ್ಥಾಪನೆಯ ಮೂಲ ಉದ್ದೇಶವೆಂದರೆ ಕ್ಯಾಥೋಲಿಕರು ಪ್ರೊಟಸ್ಟಂಟರಂತೆ ಮತ ಪ್ರಸಾರದ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವುದಾಗಿತ್ತು. ಹಾಗಾಗಿ ಪುಸ್ತಕಗಳನ್ನು ತಾವೇ ಮುದ್ರಿಸಿ ಪ್ರಕಟಿಸುವ ಸಲುವಾಗಿ ಈ ಪ್ರೆಸ್‌ನ್ನು ಸ್ಥಾಪಿಸಿದರು. ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರ ಸಹಾಯ ಹಸ್ತದಿಂದ ಚಾರ್ಬೋನನು ಕ್ಯಾಥೋಲಿಕ್

ಮಿಷನ್ ಪ್ರೆಸ್‌ನಿಂದ ಕನ್ನಡ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸಲು ಮುಂದಾದನು. ವಿದೇಶಿಯರಿಂದ ಇತರೆ ಭಾಷೆಯ ಕೃತಿಗಳು ಕನ್ನಡ ಭಾಷೆಗೆ ಅನುವಾದಗೊಂಡಿರುವ 30ಕ್ಕೂ ಹೆಚ್ಚು ಕನ್ನಡ ಕೃತಿಗಳು ಮುದ್ರಿತವಾಗಿ ಪ್ರಕಟವಾಗಿವೆ. ಇಲ್ಲಿ ಪ್ರಕಟವಾದ ಮೊದಲ ಅನುವಾದಿತ ಕನ್ನಡ ಗ್ರಂಥವೆಂದರೆ 'ದೈವ ಪರೀಕ್ಷೆ' ಈ ಕೃತಿಯನ್ನು ಬೇಸ್ಕಿನ್ ಎಂಬಾತನು ತಮಿಳಿನಲ್ಲಿ ಮೊದಲು ರಚಿಸಿದ್ದ, ಈ ತಮಿಳು ಕೃತಿಯನ್ನು ಚಾರ್ಬೋನನು ಕನ್ನಡಕ್ಕೆ ಅನುವಾದಿಸಿ ಕ್ರಿ.ಶ.1862ರಲ್ಲಿ ಕ್ಯಾಥೋಲಿಕ್ ಪ್ರೆಸ್ ನಲ್ಲಿ ಚಾರ್ಬೋನನು ಮುದ್ರಿಸಿ ಪ್ರಕಟಿಸಿದನು. 'ಸತ್ಯವೇದ ಪರೀಕ್ಷೆ' ಎಂಬ ಕೃತಿಯನ್ನು ಕ್ರಿ.ಶ.1852ರಲ್ಲಿ ಹಾಗೂ 'ದಿವ್ಯ ಮಾತೃಕೆ' ಎಂಬ ಕೃತಿಯನ್ನು ಕ್ರಿ.ಶ. 1862ರಲ್ಲಿ 'ಸುಕೃತ ಮಂತ್ರಗಳು' ಎಂಬ ಕೃತಿಯನ್ನು ಕ್ರಿ.ಶ.1866ರಲ್ಲಿ ಮುದ್ರಿಸಿ ಪ್ರಕಟಿಸಿದನು. ಇವುಗಳೆಲ್ಲಾ ಅನುವಾದ ಕೃತಿಗಳಾಗಿವೆ.

### 4. ಬೆಂಗಳೂರಿನ ವೆಸ್ಲಿಯನ್ ಪ್ರೆಸ್

ಈ ವೆಸ್ಲಿಯನ್ ಮುದ್ರಣಾಲಯವು "ಕ್ರಿ.ಶ.1840ರ ನವೆಂಬರ್ ತಿಂಗಳಲ್ಲಿ ಬೆಂಗಳೂರು ನಗರದ ಕಂಟೋನ್ಮೆಂಟ್ ಪ್ರದೇಶದ ಹಲಸೂರುಪೇಟೆ ಬಳಿ ಆರಂಭವಾಯಿತು."[3] ಇದನ್ನು ಮತ ಪ್ರಸಾರದ ದೃಷ್ಟಿಯಿಂದ ಹಾಗೂ ಶೈಕ್ಷಣಿಕ ಕಾರ್ಯಗಳ ಸಾಧನೆಗಾಗಿ ಸ್ಥಾಪಿಸಿದರು. ಬೆಂಗಳೂರಿನಲ್ಲಿ ಸ್ಥಾಪನೆಯಾದ ಮೊದಲ ಮುದ್ರಣಸಂಸ್ಥೆ ಇದಾಗಿದೆ. ಈ ಪ್ರೆಸ್ಸಿನಲ್ಲಿ ಮೊದಲ ಬಾರಿಗೆ ಅಚ್ಚಾದ ಪುಸ್ತಕವೆಂದರೆ 'Canarese and English Instructor' ಪುಸ್ತಕ. ಜಾನ್ ಗ್ಯಾರೆಟ್ ರಚಿಸಿದಂತಹ ಬಹುಭಾಷಾ 'ಭಗವದ್ಗೀತೆಯ' ಕನ್ನಡ ಅನುವಾದ ಕೃತಿಯನ್ನು ಮುದ್ರಿಸಲಾಯಿತು. 'ಪ್ರಶ್ನೋತ್ತರ ಪುಸ್ತಕ ಮಾಲೆ' ಎಂಬ ಕೃತಿಯು ಸಹ ಇಲ್ಲಿಂದ ಪ್ರಕಟವಾಯಿತು. ರೀವ್‌ನ ಶಬ್ದಕೋಶವನ್ನು 10 ಪಾಯಿಂಟ್ ಮೊಳೆಗಳ ಮೂಲಕ ಕ್ರಿ.ಶ.1858ರಲ್ಲಿ 1468 ಪುಟಗಳಿಂದ ಈ ಕೃತಿಯನ್ನು ಸಾವಿರ ಪುಟಗಳಿಗೆ ಸೀಮಿತಗೊಳಿಸಿ ಮುದ್ರಿಸಿದರು.

ಈ ಮುದ್ರಣಾಲಯದಲ್ಲಿ ಅನೇಕ ಶಾಲಾ ಪಠ್ಯಪುಸ್ತಕಗಳನ್ನು ಮುದ್ರಿಸಿ ಹೊರ ತಂದಿದ್ದಾರೆ. ಅದರಲ್ಲಿ ಗಂಗಾಧರ ಮಡಿವಾಳೇಶ್ವರ ತುರುಮುರಿಯವರು ಮುಂಬೈ ಇಲಾಖೆಯ ಟ್ರಾನ್ಸ್‌ಲೇಟರ್ ಆಫೀಸರ್ ಆಗಿದ್ದಾಗ ಅನುವಾದಿಸಿದ 'ಕನ್ನಡದ ಐದನೇ ಪುಸ್ತಕವು' ಕ್ರಿ.ಶ.1872ರಲ್ಲಿ ಈ ಮುದ್ರಣದ ಮೂಲಕ ಗ್ರಾಂಟ್ ದೊರೆಯಿಂದ ಮುದ್ರಿಸಿ ಪ್ರಕಟಿಸಲಾಯಿತು. ಈ ಕೃತಿಯು ಮುಂಬೈ ಪ್ರಾಂತ್ಯದಲ್ಲಿನ ಕನ್ನಡ ಶಾಲೆಗಳಿಗಾಗಿ ರಚಿಸಿದ ಶಾಲಾಪಠ್ಯ ಪುಸ್ತಕವಾಗಿದೆ.

### 5. ಸರ್ಕಾರಿ ಮುದ್ರಣಾಲಯ

ಜಾನ್‌ಗ್ಯಾರೆಟ್‌ನ ನೇತೃತ್ವದಲ್ಲಿ ಈ ಮುದ್ರಣ ಸಂಸ್ಥೆಯನ್ನ ಬ್ರಿಟಿಷ್ ಸರ್ಕಾರವು ಕ್ರಿ.ಶ.1850ರಲ್ಲಿ ಬೆಂಗಳೂರಿನ ಕೋಟೆ ಬಳಿ ಇರುವ ಟಿಪ್ಪು ಸುಲ್ತಾನನ ಅರಮನೆಯ ಬಳಿ ಸ್ಥಾಪಿಸಿತು. ಬಿ.ಎಲ್.ರೈಸ್ ಸಂಪಾದಿಸಿದ "ಶಾಸನ ಸಂಪುಟಗಳನ್ನು ಮತ್ತು

ಹಳಗನ್ನಡ ಕಾವ್ಯಗಳನ್ನು ಮುದ್ರಿಸಲು ಈ ಪ್ರೆಸ್‌ನಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದರು. ಕಿಟೆಲ್ ರವರಿಗಿಂತ ಮುಂಚೆಯೇ 'ಶಬ್ದಮಣಿ ದರ್ಪಣ'ವು ಇಲ್ಲಿ ಪ್ರಕಟವಾಯಿತು."[4] ತಮಿಳಿನ ತಾಂಡವರಾಯನು ಬರೆದಂತ 'ಕಥಾಮಂಜರಿ' ಎಂಬ ಕಥಾಗುಚ್ಛವನ್ನು ಜಾನ್‌ಗ್ಯಾರೆಟ್ ಕನ್ನಡದಲ್ಲಿ ತಿದ್ದಿ ಅದನ್ನು ಈ ಮುದ್ರಣಾಲಯದಲ್ಲಿ ಕ್ರಿ.ಶ.1866ರಲ್ಲಿ ಮುದ್ರಿಸಿ ಪ್ರಕಟಿಸಿದನು. "ಕೇಶಿರಾಜನ ಶಬ್ದಮಣಿದರ್ಪಣವು ಕನ್ನಡ ವ್ಯಾಕರಣಕ್ಕೆ ಬುನಾದಿ ಹಾಕಿದ ಕೃತಿ. ಇದನ್ನು ಜಾನ್ ಗ್ಯಾರೆಟ್ ಕ್ರಿ.ಶ.1868"[5] ರಲ್ಲಿ ಈ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದನು. ಜಾನ್ ಗ್ಯಾರೆಟ್ 'ಅಡ್ವರ್ಟೈಸ್ಮೆಂಟ್' ಹೆಸರಿನ ಎರಡು ಪುಟದ ಇಂಗ್ಲಿಷ್ ಮುನ್ನುಡಿಯಲ್ಲಿ ದೇಶೀಯ ಪಂಡಿತರನ್ನೂ, ಕೇಶಿರಾಜನ ಶಬ್ದಮಣಿದರ್ಪಣ ಕೃತಿಯ ರಚನೆ ಮತ್ತು ಮುದ್ರಣ ರೂಪಕಾಣಲು ನೆರವಾದವರನ್ನು ನೆನೆದಿದ್ದಾರೆ.

### 6. ಸದ್ವಿದ್ಯಾ ಮಂದಿರ ಮುದ್ರಾಶಾಲೆ

ಮೈಸೂರಿನಲ್ಲಿ ಸ್ಥಾಪಿತವಾಗಿದ್ದ ಹಳೆಯ ಮುದ್ರಣಾಲಯಗಳಲ್ಲಿ ಸದ್ವಿದ್ಯಾ ಮಂದಿರ ಮುದ್ರಾಶಾಲೆಯು ಒಂದು. ಇದನ್ನು "ಕುಮಾರ ಸ್ವಾಮಿ ತಿರುಮಾಚಾರ್ಯರು ಮತ್ತು ಸಂಸ್ಕೃತ ವಿದ್ವಾಂಸರಾದ ಆಸೂರಿ ಆನಾಂದಾಳ್ವಾರ್ ಅವರು"[6] ಸ್ಥಾಪಿಸಿದರು. ಈ ಮುದ್ರಣಾಲಯದಲ್ಲಿ "ಸಂಸ್ಕೃತ ಭಾಷೆಯ ಧಾರ್ಮಿಕ, ಸಾಹಿತ್ಯಕ ಗ್ರಂಥಗಳನ್ನು ಕನ್ನಡ ಅರ್ಥಾನುವಾದ ವಿವರಣೆ ವ್ಯಾಖ್ಯಾನಗಳೊಂದಿಗೆ ಪ್ರಕಟಿಸುತ್ತಿದ್ದರು"[7] ಈ ಮುದ್ರಣಾಲಯಕ್ಕೆ ಭೇಟಿ ನೀಡುತ್ತಿದ್ದ ಮಂ.ಆ.ರಾಮಾನುಜಯ್ಯಂಗಾರ್ ಅವರು ಸದ್ವಿದ್ಯಾಮಂದಿರ ಮುದ್ರಾಶಾಲೆಯ ಮುಖ್ಯಸ್ಥರೊಂದಿಗೆ ಮತ್ತು ಎಸ್.ಜಿ. ನರಸಿಂಹಾಚಾರ್ಯ ಅವರೊಂದಿಗೆ ಸಮಾಲೋಚಿಸಿ 'ಆರ್ಯಮತ ಸಂಜೀವಿನಿ' ಎಂಬ ಪತ್ರಿಕೆಯನ್ನು ಕ್ರಿ.ಶ.1888ರಲ್ಲಿ ಸ್ಥಾಪಿಸಿದರು. "ಸಂಸ್ಕೃತ ಮತ್ತು ತಮಿಳಿನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಗ್ರಂಥಗಳನ್ನು ಸುಲಭವಾದ ಕನ್ನಡದಲ್ಲಿ ಭಾಷಾಂತರಿಸಿ"[8] ಕನ್ನಡಿಗರಿಗೆ ಒದಗಿಸಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಸ್ಥಾಪಿಸಿದರು. ಈ ಪತ್ರಿಕೆಯ ಮೂಲಕ ಮೊದಲಿಗೆ ಮೈಸೂರು ಅರಸರಾಗಿದ್ದ ಚಿಕ್ಕ ದೇವರಾಜ ಒಡೆಯರ ಕೃತಿಗಳನ್ನು ಪ್ರಕಟಿಸಿದರು.

ಸದ್ವಿದ್ಯಾ ಮಂದಿರ ಮುದ್ರಾಶಾಲೆಯಲ್ಲಿ ಮುದ್ರಿತವಾದ ಆರ್ಯಮತ ಪತ್ರಿಕೆಯ ಮೂಲಕ ಇವರು ಪ್ರಕಟಿಸಿದ ಪ್ರಮುಖ ಹಳಗನ್ನಡ ಕೃತಿಗಳೆಂದರೆ ಎಂ.ಎ.ರಾಮಾನುಜಯ್ಯಂಗಾರ್ ರವರು ಸಂಪಾದಿಸಿದಂತಹ 'ಚಿಕ್ಕದೇವರಾಯ ಬಿನ್ನಪಂ' ಎಂಬ ಕೃತಿಯನ್ನು ಕ್ರಿ.ಶ.1890ರಲ್ಲಿ ಪ್ರಕಟಿಸಿದರು. ಚಿಕ್ಕುಪಾಧ್ಯಾಯರ 'ವಿಷ್ಣುಪುರಾಣ', 'ಅರ್ಥಪಂಚಕವು', 'ಗೀತರೂಪ ಮುಕುಂದಮಾಲೆ', 'ಭಗವದ್ಗೀತಾರ್ಥಪ್ರತಿಪಾದನ', 'ನೀತಿಸುಭಾಷಿತ' ಹಾಗೂ "ಮಂ.ಆ.ರಾ. ತಾವೇ 'ಮಹಾಭಾರತ ಕಥಾ ಪ್ರಸಂಗ' ಎಂಬ ಪ್ರಧಾನ ಶೀರ್ಷಿಕೆಯಲ್ಲಿ ಆದಿಪರ್ವದ ಕಥಾಸಾರವನ್ನು ಗದ್ಯರೂಪದಲ್ಲಿ ಪ್ರಕಟಿಸುತ್ತಾ ಬಂದರು."[9] ಈ ಮುದ್ರಣಶಾಲೆಯು ಸಂಚಿಹೊನ್ನಮ್ಮ ರವರು ರಚಿಸಿದಂತಹ 'ಹದಿಬದೆಯ ಧರ್ಮ' ಕೃತಿಯನ್ನು

ಕ್ರಿ.ಶ.1893ರಲ್ಲಿ ಮುದ್ರಿಸಿ ಪ್ರಕಟಿಸಿತು. ಇನ್ನೂ ಹಲವಾರು ವಿವಿಧ ಬಗೆಯ ಸಾಹಿತ್ಯ ಕೃತಿಗಳು ಕನ್ನಡ ಸಾಹಿತ್ಯಕ್ಕೆ ಈ ಸಂಸ್ಥೆಯಿಂದ ಪ್ರಕಟಗೊಂಡು ಸೇರ್ಪಡೆಯಾಗಿವೆ.

### 7. ಕರ್ನಾಟಕ ಕಾವ್ಯ ಮಂಜರಿ ಮತ್ತು ಕಾವ್ಯ ಕಲಾನಿಧಿ ಗ್ರಂಥಮಾಲೆ

ಪ್ರಾಚೀನ ಕನ್ನಡ ಸಾಹಿತ್ಯದ ಗ್ರಂಥಗಳನ್ನು ಪ್ರಕಟಿಸುವ ಉದ್ದೇಶದಿಂದ "ಕರ್ನಾಟಕ ಕಾವ್ಯಮಂಜರಿ' ಎಂಬ ಮಾಸಪತ್ರಿಕೆಯನ್ನು ಎಸ್.ಜಿ.ನರಸಿಂಹಾಚಾರ್ ಮತ್ತು ಮಂ.ಆ.ರಾಮಾನುಜಯ್ಯಂಗಾರ್ ರವರು ಕ್ರಿ.ಶ.1892"[10] ರಲ್ಲಿ ಸ್ಥಾಪಿಸಿದರು. ಈ ಪತ್ರಿಕೆಯು ಕೆಲವು ವರ್ಷಗಳ ಕಾಲ ತನ್ನ ಸಾಹಿತ್ಯ ಸೇವೆಯನ್ನು ನಿರ್ವಹಿಸಿ ಸ್ಥಗಿತಗೊಂಡಿತು. ತದನಂತರ ಇವರಿಬ್ಬರು ಸೇರಿ "ಕರ್ನಾಟಕ ಕಾವ್ಯ ಕಲಾನಿಧಿ ಎಂಬ ಹೆಸರಿನ ಪತ್ರಿಕೆಯನ್ನು ಕ್ರಿ.ಶ.1899ರಲ್ಲಿ ಸ್ಥಾಪಿಸಿದರು."[11] ಇದರ ಮೂಲಕ ಹಳಗನ್ನಡ ಕೃತಿಗಳನ್ನು ಪ್ರಕಟಿಸಿದರು. ಇವರು ಹಸ್ತಪ್ರತಿಗಳನ್ನು ಹುಡುಕಿ ತಂದು ಅವುಗಳನ್ನು ಪಾಠಪರಿಷ್ಕರಣೆ ಮಾಡಿ ಮೊದಲಿಗೆ 'ಕಾವ್ಯ ಮಂಜರಿ' ಎಂಬ ಪತ್ರಿಕೆಯ ಮೂಲಕ ಹಲವಾರು ಹಳಗನ್ನಡದ ಕೃತಿಗಳನ್ನು ಪ್ರಕಟಿಸುತ್ತಿದ್ದರು. ಅದು ನಿಂತಮೇಲೆ 'ಕರ್ನಾಟಕ ಕಾವ್ಯ ಕಲಾನಿಧಿ' ಪತ್ರಿಕೆಯ ಮೂಲಕ ಇವರು ಶಾಸ್ತ್ರಸಾಹಿತ್ಯ, ಚಂಪೂ ಸಾಹಿತ್ಯ, ಷಟ್ಪದಿಸಾಹಿತ್ಯ, ರಗಳೆಸಾಹಿತ್ಯ, ತ್ರಿಪದಿಸಾಹಿತ್ಯದ ಗ್ರಂಥಗಳನ್ನೂ, ಕಂದಪದ್ಯ ಗ್ರಂಥಗಳನ್ನೂ ಮತಗ್ರಂಥಗಳನ್ನೂ, ಮತ್ತು ಛಂದಸ್ಸು, ಸಾಂಗತ್ಯಗಳ ಹಲವಾರು ಹಳಗನ್ನಡ ಕೃತಿಗಳನ್ನು ಪ್ರಕಟಿಸುತ್ತಾ ಬಂದರು. ದುರ್ಗಸಿಂಹ, ರತ್ನಾಕರವರ್ಣಿ, ಆಂಡಯ್ಯ, ಉದಯಾದಿತ್ಯ, ಸಿಂಗಾರಾರ್ಯ, ಚತುರ್ಮುಖ ಬೊಮ್ಮರಸ, ಅಭಿನವವಾದಿವಿದ್ಯಾನಂದ, ತಿರುಮಲಾರ್ಯ, ಕುವಲಯಾನಂದ, ಕವಿಕಾಮ, ನಾಗಚಂದ್ರ, ಮುದ್ದಣ, ಮುಂತಾದವರ ಅನೇಕ ಹಳಗನ್ನಡ ಕವಿಗಳ ಕೃತಿಗಳನ್ನು ಈ ಗ್ರಂಥಮಾಲೆಯ ಮೂಲಕ ಪ್ರಕಟಿಸಿದ್ದಾರೆ.

### 8. ಸರ್ಕಾರದ ಬ್ರಾಂಚ್ ಮುದ್ರಾಶಾಲೆ

ಮೈಸೂರು ಸರಕಾರದವರು ಆಡಳಿತದ ಅನುಕೂಲಕ್ಕಾಗಿ ಸ್ಥಾಪಿಸಿದ ಈ ಮುದ್ರಣ ಸಂಸ್ಥೆಯಲ್ಲಿ ಶಾಲಾ ಪಠ್ಯಪುಸ್ತಕಗಳನ್ನು ಮುದ್ರಿಸುವ ಜೊತೆಗೆ ಹಲವಾರು ಗಣ್ಯರು ಅನುವಾದಿಸಿದ ಮತ್ತು ಸಂಪಾದಿಸಿದ ಕೃತಿಗಳನ್ನು ಸಹ ಮುದ್ರಿಸಿ ಪ್ರಕಟಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಮೈಸೂರು ಸರ್ಕಾರದವರ ನೇತೃತ್ವದಲ್ಲಿ ಪ್ರಕಟಗೊಂಡ 'ಪದ್ಯಸಂಗ್ರಹ' ಎಂಬ ಕೃತಿಯನ್ನು ಕ್ರಿ.ಶ.1880ರಲ್ಲಿ ಪ್ರಕಟಿಸಿತು. ಇದರಲ್ಲಿ ಸರ್ವಜ್ಞ, ಕುಮಾರವ್ಯಾಸ, ಲಕ್ಷ್ಮೀಶ, ಕುಮಾರ ವಾಲ್ಮೀಕಿ, ಮೊದಲಾದವರ ಕೃತಿಗಳ ಭಾಗಗಳೊಂದಿಗೆ ಮೊದಲಾದ ನೀತಿಪದ್ಯಗಳನ್ನು ಒಳಗೊಂಡಿದೆ. ಬಸವಪ್ಪಶಾಸ್ತ್ರೀ ರವರ 'ದಮಯಂತೀ ಸ್ವಯಂವರ' ಕೃತಿಯನ್ನು ಕ್ರಿ.ಶ.1891ರಲ್ಲಿ ಮುದ್ರಿಸಿ ಪ್ರಕಟಿಸಿತು. ಡಿ.ಎಲ್.ನರಸಿಂಹಾಚಾರ್ಯ ಮತ್ತು ಟಿ.ಎಸ್. ವೆಂಕಣ್ಣಯ್ಯ ಹಾಗೂ ತೀ.ನಂ.ಶ್ರೀಕಂಠಯ್ಯ ಅವರು ಸಂಪಾದಿಸಿದಂತಹ 'ಭೀಷ್ಮಪರ್ವ ಸಂಗ್ರಹ' ಕೃತಿಯನ್ನು ಕ್ರಿ.ಶ.1930ರಲ್ಲಿ ಪ್ರಕಟಿಸಿತು. ಲೂಯಿ ರೈಸ್ ರವರು ಸಂಪಾದಿಸಿದಂತಹ 'ಅಮರಕೋಶವೆಂಬ ನಾಮಲಿಂಗನು ಶಾಸನವು' ಎಂಬ

ಕೃತಿಯನ್ನು ಕ್ರಿ.ಶ.1917ರಲ್ಲಿ ಹಾಗೂ ಶೇಷಾಚಾರ್ಯ ಪುಟ್ಟಪರ್ತಿ ರವರ 'ಸಂಸ್ಕೃತ ಬಾಲ ಬೋಧಿನಿ'ಎಂಬ ಕೃತಿಯನ್ನು ಕ್ರಿ.ಶ.1890ರಲ್ಲಿ ಪ್ರಕಟಿಸಿತು. ಎ.ಆನಂದ್ ರಾವ್ ಅವರು ಅನುವಾದಿಸಿದಂತಹ 'ರಾಮವರ್ಮ ಲೀಲಾವತಿ ಚರಿತ್ರೆ'ಯನ್ನು ಕ್ರಿ.ಶ.1889ರಲ್ಲಿ ಮುದ್ರಿಸಿ ಪ್ರಕಟಿಸಿತು. ಸುಬ್ಬಾಶಾಸ್ತ್ರಿ ನಂಜನಗೂಡು ರವರ 'ಕನ್ನಡ ಸೀತಾ ಚರಿತ್ರೆ' ಎಂಬ ಕೃತಿಯನ್ನು ಕ್ರಿ.ಶ.1896ರಲ್ಲಿ ಪ್ರಕಟಿಸಿತು. ಹೀಗೆ ಈ ಸಂಸ್ಥೆಯು ಅನೇಕ ಕನ್ನಡ ಕೃತಿಗಳನ್ನು ಮುದ್ರಿಸಿ ಪ್ರಕಟಿಸಿರುವುದರಿಂದ ಕನ್ನಡ ಸಾಹಿತ್ಯದ ಸಂಪತ್ತು ಹೆಚ್ಚಿದೆ.

**9. ಸುಬೋಧ ಪ್ರಕಟಣಾಲಯ ಅಥವಾ 'ಸುಬೋಧ ಕುಸುಮಾಂಜಲಿ' ಪ್ರಕಟಣಾಲಯ (ಬೆಂಗಳೂರು)**

ಸುಬೋಧ ಮುದ್ರಣಾಲಯ ಅಥವಾ ಸುಬೋಧ ಪ್ರಕಟಣಾಲಯ ಎಂಬ ಸಂಸ್ಥೆಯನ್ನು ಸುಬೋಧ ರಾಮರಾಯರು ಕ್ರಿ.ಶ.1925ರಲ್ಲಿ ಚಾಮರಾಜನಗರ ಪೇಟೆಯ ಮೂರನೇ ಬೀದಿಯಲ್ಲಿ ಸ್ಥಾಪಿಸಿದರು. ಇವರು ಸ್ಥಾಪಿಸಿದ ಮುದ್ರಣಾಲಯದಿಂದ ಮುದ್ರಣವಾದ ಪುಸ್ತಕಗಳನ್ನು ಪ್ರಕಟಿಸಲು 'ಸುಬೋಧ ಕುಸುಮಾಂಜಲಿ' ಎಂಬ ಗ್ರಂಥಮಾಲೆಯನ್ನು ತೆರೆದರು. ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯಲ್ಲಿ ಜೀವನ ಚರಿತ್ರೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸುಬೋಧರಾಮರಾಯರು ದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಲು 'ಹರಿದಾಸ ಕೀರ್ತನ ತರಂಗಿಣಿ' ಗ್ರಂಥಮಾಲೆಯನ್ನು ತೆರೆದು ಅದರ ಮೂಲಕ ಶ್ರೀಪಾದರಾಯರು, ಶ್ರೀವ್ಯಾಸರಾಯರು, ಪುರಂದರದಾಸರು, ವಾದಿರಾಜರು, ಕನಕದಾಸರು ಹಾಗೂ ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರಿಗೆ ಸಂಬಂಧಿಸಿದ ಪುಸ್ತಕಗಳನ್ನು ಪ್ರಕಟಿಸಿದರು. ಎರಡಾಣೆ ಪುಸ್ತಕಗಳಿಗೆ 1933ರ ಹೊತ್ತಿಗೆ ಬ್ರಿಟನ್, ಆಫ್ರಿಕನ್, ರಂಗೂನ್ ಮುಂತಾದ ದೇಶಗಳಿಂದಲೂ ಬೇಡಿಕೆ ಬರುತ್ತಿದ್ದವು"[12] ಇದರಿಂದ ಈ ಮಾಲೆಯಲ್ಲಿ ಪ್ರಕಟವಾದ ಕೃತಿಗಳಿಗೆ ವಿದೇಶದಲ್ಲೂ ಮಾನ್ಯತೆ ದೊರಕಿದೆ.

**10. ಮೈಸೂರು ಓರಿಯಂಟಲ್ ಲೈಬ್ರರಿ ಅಥವಾ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್‌ನ 'ಕನ್ನಡ ಗ್ರಂಥಮಾಲೆ'**

ಈ ಸಂಸ್ಥೆಯನ್ನು ಬ್ರಿಟಿಷರು ಕ್ರಿ.ಶ.1891ರಲ್ಲಿ ಸ್ಥಾಪಿಸಿದರು. "ಮೈಸೂರಿನಲ್ಲಿ ಕ್ರಿ.ಶ.1891ರಲ್ಲಿಯೇ ಚಾಮರಾಜ ಒಡೆಯರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಓರಿಯಂಟಲ್ ಲೈಬ್ರರಿ ಹೊಸ ಕಾನೂನು ಜಾರಿಗೆ ಬಂದ ಮೇಲೆ 'ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್' ಎಂದು ಪರಿವರ್ತನೆಗೊಂಡಿತು."[13] ಇದನ್ನು ಸ್ಥಾಪಿಸಿದ ಮೇಲೆ ಇದರ ಒಂದು ಭಾಗವಾದ ಪ್ರಾಕ್ತನ ಇಲಾಖೆ ಎಂಬ ಸಂಸ್ಥೆಯು ಗ್ರಂಥ ಪ್ರಕಟಣೆಯ ಕಾರ್ಯವನ್ನು ಕೈಗೊಂಡಿತು. ಈ ಸಂಸ್ಥೆಯ ಸ್ಥಾಪನೆಗೆ ಮೂಲ ಉದ್ದೇಶವೆಂದರೆ ಸಂಸ್ಕೃತಕ್ಕೆ ಸಂಬಂಧಿಸಿದ ಹಾಗೂ ಕನ್ನಡ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಸಂರಕ್ಷಿಸಿವುದು. ಓರಿಯಂಟಲ್ ಲೈಬ್ರರಿಯು

ಪ್ರಾಚೀನ ಕನ್ನಡ ಕೃತಿಗಳ ಮೂಲ ಹಸ್ತಪ್ರತಿಗಳನ್ನು ಹುಡುಕಿ ಪುಸ್ತಕ ರೂಪದಲ್ಲಿ ಪ್ರಕಟಿಸುವ ಕಾರ್ಯವನ್ನು ಕೈಗೊಂಡಿತು. ಹಾಗಾಗಿ ಈ ಸಂಸ್ಥೆಯು 'ಕನ್ನಡ ಗ್ರಂಥಮಾಲೆ' ಎಂಬ ಪ್ರಕಟಣಾ ಸಂಸ್ಥೆಯನ್ನು ಆರಂಭಿಸಿತು. ಈ ಕನ್ನಡ ಗ್ರಂಥಮಾಲೆಯ ಮೂಲಕ ಹೊರಬಂದ "ಮೊದಲನೆಯ ಪುಸ್ತಕವೆಂದರೆ ಎಸ್. ಜಿ.ನರಸಿಂಹಾಚಾರ್ಯರು ಸಂಪಾದಿಸಿಕೊಟ್ಟ ಪಂಪನ 'ಆದಿಪುರಾಣ'"[14] ವಾಗಿದೆ. ಇದನ್ನು ಕ್ರಿ.ಶ.1900ರಲ್ಲಿ ಈ ಗ್ರಂಥಮಾಲೆಯು ಪ್ರಕಟಿಸಿತು. ವಿ.ಶ್ಯಾಮಾಚಾರ್ಯ ರವರ ಸಂಪಾದಿತ ಕೃತಿಯಾದ 'ಕರ್ನಾಟಕ ಮಹಾಭಾರತ ಸಭಾಪರ್ವ' ಇದು ಆದಿಪರ್ವದ ಮೊದಲ ಭಾಗವಾಗಿದೆ. ಈ ಕೃತಿಯನ್ನು ಕ್ರಿ.ಶ.1912ರಲ್ಲಿ ಪ್ರಕಟಿಸಿತು. ಇವರೇ ಸಂಪಾದಿಸಿದಂತಹ 'ಕರ್ನಾಟಕ ಮಹಾಭಾರತ ಚತುಗೃಹಾದಿ ಪರ್ವಗಳು' ಎಂಬ ಕೃತಿಯನ್ನು ಕ್ರಿ.ಶ.1915ರಲ್ಲಿ ಹಾಗೂ 'ಕರ್ನಾಟಕ ಮಹಾಭಾರತ ಸಭಾಪರ್ವ'ಕೃತಿಯನ್ನು ಕ್ರಿ.ಶ.1915ರಲ್ಲಿ ಮತ್ತು 'ಕರ್ನಾಟಕ ಮಹಾಭಾರತ ಅರಣ್ಯಪರ್ವ'ವನ್ನು ಕ್ರಿ.ಶ.1918ರಲ್ಲಿ ಇವರ ಮತ್ತೊಂದು ಸಂಪಾದಿತ ಕೃತಿಯಾದ 'ಮಹಾಭಾರತಂ ಪೌಲೋಮ ಆಸ್ತೀಕಪರ್ವಗಳು' ಎಂಬ ಕೃತಿಯನ್ನು ಕ್ರಿ.ಶ.1911ರಲ್ಲಿ ಪ್ರಕಟಿಸಿತು. ಆರ್. ಶಾಮಶಾಸ್ತ್ರಿ ಅವರು ಸಂಪಾದಿಸಿದಂತಹ ಕೃತಿಗಳಾದ 'ಕರ್ನಾಟಕ ವಿರಾಟ ಪರ್ವ' ಭಾಗವನ್ನು ಕ್ರಿ.ಶ.1920ರಲ್ಲಿ 'ಆಕ್ರೋರ ಚರಿತ್ರೆ' ಎಂಬ ಕೃತಿಯನ್ನು ಕ್ರಿ.ಶ.1923ರಲ್ಲಿ ಪ್ರಕಟಿಸಿತು. ಡಿ.ಶ್ರೀನಿವಾಸಾಚಾರ್ ಮತ್ತು ಡಿ.ಎಲ್.ನರಸಿಂಹಾಚಾರ್ ಅವರು ಸಂಪಾದಿಸಿದಂತಹ 'ಕರ್ನಾಟಕ ಮಹಾಭಾರತ ಭೀಷ್ಮಪರ್ವ'ವನ್ನು ಕ್ರಿ.ಶ.1933ರಲ್ಲಿ, ಎಂ.ಎಸ್.ಬಸವಲಿಂಗಯ್ಯ ಮತ್ತು ಎನ್. ಅನಂತರಂಗಾಚಾರ್ಯ ರವರು ಸಂಪಾದಿಸಿದಂತಹ 'ಕರ್ನಾಟಕ ಮಹಾಭಾರತ ದ್ರೋಣಪರ್ವ'ಎಂಬ ಕೃತಿಯನ್ನು ಕ್ರಿ.ಶ.1936ರಲ್ಲಿ ಹಾಗೂ 'ಕರ್ನಾಟಕ ಮಹಾಭಾರತ ಕರ್ಣಪರ್ವ' ಎಂಬ ಕೃತಿಯನ್ನು ಕ್ರಿ.ಶ.1940ರಲ್ಲಿ ಮತ್ತು 'ಕರ್ನಾಟಕ ಮಹಾಭಾರತ ಶಲ್ಯ ಗದಾಪರ್ವಗಳು' ಎಂಬ ಕೃತಿಯನ್ನು ಕ್ರಿ.ಶ.1943ರಲ್ಲಿ ಪ್ರಕಟಿಸಿತು. ಹೀಗೆ ಹಸ್ತಪ್ರತಿಯಲ್ಲಿ ಹುದುಗಿ ಹೋಗಿದ್ದ ಹಳಗನ್ನಡ ಕೃತಿಗಳನ್ನು ಮುದ್ರಿಸಿ ಪ್ರಕಟಿಸುವಲ್ಲಿ ಈ ಸಂಸ್ಥೆಯ ಪಾತ್ರ ಪ್ರಮುಖವಾದುದ್ದು. ಇಂಥ ಮಹತ್ವದ ಕಾರ್ಯದಿಂದ ಹಳಗನ್ನಡದ ಕೃತಿಗಳು ಕನ್ನಡಿಗರಿಗೆ ದೊರಕುವಂತಾಯಿತು.

### 11. ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ಇತಿಹಾಸ ಇವುಗಳ ರಕ್ಷಣೆ ಮತ್ತು ಅಭಿವೃದ್ಧಿಯ ಉದ್ದೇಶದಿಂದ ಕ್ರಿ.ಶ.1915ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಲಾಯಿತು. ಈ ಪರಿಷತ್ತಿನ ಮೂಲಕ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಗ್ರಂಥಗಳು ಪ್ರಕಟಗೊಂಡವು. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಗ್ರಂಥಪ್ರಕಟಣೆಗಳ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದೆ. "ಒಂದುವರೆ ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ."[15] ಮಕ್ಕಳಿಗೆ, ಮಹಿಳೆಯರಿಗೆ, ಕನ್ನಡಿಗರಿಗೆ, ಹಾಗೂ ಹಿರಿಯವಿದ್ವಾಂಸರಿಗೆ ಮತ್ತು ಶಾಲಾಮಕ್ಕಳಿಗೆ ಬೇಕಾಗುವಂತಹ ಅನೇಕ ಪುಸ್ತಕಗಳು ಈ ಪರಿಷತ್ತಿನಿಂದ ಪ್ರಕಟಗೊಂಡಿವೆ. ಈ ಪರಿಷತ್ತಿನಿಂದ

“ಜೈನಸಾಹಿತ್ಯ, ವೈಷ್ಣವಸಾಹಿತ್ಯ, ವೀರಶೈವಸಾಹಿತ್ಯ, ವಚನಸಾಹಿತ್ಯ, ಕೀರ್ತನಸಾಹಿತ್ಯ, ನಿಘಂಟುಗಳು, ಅಲಂಕಾರ, ಛಂದಸ್ಸು, ವ್ಯಾಕರಣ, ವಿಮರ್ಶೆ, ಸುಭಾಷಿತ, ಪ್ರಬಂಧ, ಗದ್ಯಾನುವಾದ, ಮಕ್ಕಳಸಾಹಿತ್ಯ, ಮಹಿಳಾ ಸಾಹಿತ್ಯ, ಗೌರವ ಗ್ರಂಥಗಳು, ಕಾವ್ಯ, ಕವಿತೆ, ನಾಟಕ, ಶಿಲ್ಪ, ಸಂಗೀತ, ಜೀವನ ಚರಿತ್ರೆ, ಭಾಷಾಶಾಸ್ತ್ರ, ಪಠ್ಯ ಗ್ರಂಥಗಳು, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಆತ್ಮಕಥೆಗಳು, ಕಥೆ, ಕಾದಂಬರಿ, ಜಾನಪದ, ವಿಜ್ಞಾನ, ವಿಶೇಷ ಸಂಚಿಕೆಗಳು, ಕಾನೂನುಶಾಸ್ತ್ರ,”[16] ಹಾಗೂ ಕಲೆಗೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳನ್ನು ಪ್ರಕಟವಾಗಿವೆ. ಈ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಮೊದಲ ಪುಸ್ತಕವೆಂದರೆ ಬಿ.ಎ.ನಂಗಪುರಂ ವೆಂಕಟೇಶ್ ಅಯ್ಯಂಗಾರ್ ರವರು ಮೈಸೂರು ಸರಕಾರದ ಪವನಶಾಸ್ತ್ರ ಶಾಲಾಧ್ಯಕ್ಷರಾಗಿದ್ದ ಸಮಯದಲ್ಲಿ ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದ ‘ಜ್ಯೋತಿರ್ವಿನೋದಿನಿ’ ಎಂಬ ಗ್ರಂಥ. ಇದನ್ನು 1931ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ‘ಕಂಠೀರವ ನರಸಿಂಹರಾಜ ಪರಿಪೋಷಿತ ಕರ್ನಾಟಕ ವೈಜ್ಞಾನಿಕ ಗ್ರಂಥಮಾಲೆ’ಯನ್ನು ಸ್ಥಾಪಿಸಿ ಇದರ ಮೊದಲನೆಯ ಗ್ರಂಥವಾಗಿ ಪ್ರಕಟಿಸಿತು. ಇದರ ಅಂದಿನ ಬೆಲೆ ಎರಡು ರೂಪಾಯಿಗಳು. ಹೀಗೆ ಹಲವಾರು ಸಾಹಿತ್ಯ ಪ್ರಕಾರಗಳ ಕೃತಿಗಳು ಈ ಸಂಸ್ಥೆಯಿಂದ ಬೆಳಕು ಕಂಡವು.

ಮೈಸೂರು ಪರಿಸರದಲ್ಲಿದ್ದ ಇನ್ನೂ ಹಲವಾರು ಪ್ರಕಟಣಾ ಸಂಸ್ಥೆಗಳು ನಮ್ಮ ಪ್ರಾಚೀನ ಕನ್ನಡ ಸಾಹಿತ್ಯ ಕಣ್ಮರೆಯಾಗುವುದನ್ನು ತಪ್ಪಿಸಿವೆ. ಹಸ್ತ ಪ್ರತಿಗಳ ಜಾಡು ಹಿಡಿದು ಅವುಗಳನ್ನು ಹುಡುಕಿ ತಂದು ತಿದ್ದಿ ತೀಡಿ ಅದರಲ್ಲಿನ ವಿಷಯಗಳನ್ನು ಕನ್ನಡ ಜನತೆಗೆ ತಲುಪಿಸುವಂತಹ ಕೆಲಸಗಳು ಕ್ರೈಸ್ತ ಮಿಷನರಿಗಳು, ವಿದೇಶಿ ಮತ್ತು ದೇಶಿ ವಿದ್ವಾಂಸರುಗಳಿಂದ ಆಗಿವೆ. ಇವರುಗಳ ಕುತೂಹಲದ ಸಂಶೋಧನಾ ಮಾರ್ಗವು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರವಾಗಿ ಉಳಿಯುವಂತ ಇತಿಹಾಸವನ್ನು ಸೃಷ್ಟಿಸಿವೆ.

**ಕೊನೆ ಟಿಪ್ಪಣಿಗಳು:**


1. ಶ್ರೀನಿವಾಸ ಹಾವನೂರು, (2021), ಹೊಸಗನ್ನಡದ ಅರುಣೋದಯ, ಬೆಂಗಳೂರು: ರಾಜಾ ಪ್ರಿಂಟರ್ಸ್, ಪು.ಸಂ. 46
2. ಹೊನ್ನುಸಿದ್ಧಾರ್ಥ ಸಿ.ಬಿ. (ಪ್ರಧಾನ ಸಂಪಾದಕರು), (2014), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ–6 ಭಾಗ–1, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಪು.ಸಂ. 43
3. ಕೃಷ್ಣಯ್ಯ ಎಂ.ಎಚ್. (ಸಂಪಾದಕರು), (2016), ಬೆಂಗಳೂರು ದರ್ಶನ ಸಂಪುಟ 3, ಬೆಂಗಳೂರು: ಉದಯಭಾನು ಕಲಾ ಸಂಘ, ಪು.ಸಂ. 116
4. ಹೊನ್ನುಸಿದ್ಧಾರ್ಥ ಸಿ.ಬಿ. (ಪ್ರಧಾನ ಸಂಪಾದಕರು), (2014), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

ಸಂಪುಟ–6 ಭಾಗ–2, ಬೆಂಗಳೂರು: ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಪು.ಸಂ. 42

5. ಅದೇ, ಪು. 165
6. ವೆಂಕಟಾಚಲಶಾಸ್ತ್ರೀ ಟಿ. ವಿ., (2014), ಭಾರತೀಯ ಸಾಹಿತ್ಯ ನಿರ್ಮಾಪಕರು ಎಂ. ಎ. ರಾಮಾನುಜ ಅಯ್ಯಂಗಾರ್ ರವರು, ಹೊಸ ದೆಹಲಿ: ಸಾಹಿತ್ಯ ಅಕಾಡೆಮಿ, ಪು.ಸಂ. 13
7. ಅದೇ, ಪು.ಸಂ. 13
8. ಅದೇ, ಪು.ಸಂ. 13
9. ಅದೇ, ಪು.ಸಂ. 14
10. ಅಂಗಡಿ ಎಸ್.ಎಸ್., (2007), ಕನ್ನಡ ಗ್ರಂಥಸಂಪಾದನೆ ಬಂಧ ಮತ್ತು ವಿನ್ಯಾಸ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 81
11. ಅದೇ, ಪು.ಸಂ. 82
12. ಕೃಷ್ಣರಾವ್ ಕೆ.ಎಂ., (1972), ಸುಬೋಧ ರಾಮರಾಯರು ಜೀವನ ಚರಿತ್ರೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 65
13. ಕಮಲಾ ಹಂಪನಾ (ಸಂ.), (2015), ಸಂಶೋಧನೆ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 174
14. ಜವರೇಗೌಡ ಡಿ. (ಪ್ರಧಾನ ಸಂಪಾದಕರು), (1969), ಪ್ರಬುದ್ಧ ಕರ್ನಾಟಕ ಚಿನ್ನದ ಸಂಚಿಕೆ ಸಾಹಿತ್ಯ ಸಂಪುಟ, ಮೈಸೂರು: ಮೈಸೂರು ವಿಶ್ವವಿದ್ಯಾಲಯ, ಪು.ಸಂ. 230
15. ಜಗನಾಥ ಹೇಮಾದ್ರಿ, (2022), ಕನ್ನಡ ಸಾಹಿತ್ಯ ಪರಿಷತ್ತು 100, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 456
16. ಅದೇ, ಪು.ಸಂ. 456

## ಪರಾಮರ್ಶನ ಗ್ರಂಥಗಳು:


1. ಶ್ರೀನಿವಾಸ ಹಾವನೂರು, (2021), ಹೊಸಗನ್ನಡದ ಅರುಣೋದಯ, ಬೆಂಗಳೂರು: ರಾಜಾ ಪ್ರಿಂಟರ್ಸ್.
2. ಧಾರವಾಡಕರ್ ರಾ.ಯ., (2024), ಹೊಸಗನ್ನಡ ಸಾಹಿತ್ಯದ ಉದಯಕಾಲ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
3. ಗೀತಾಚಾರ್ಯ ನಾ., (2009), ಹಸ್ತಪ್ರತಿ ಅಧ್ಯಯನಶಾಸ್ತ್ರ, ಬೆಂಗಳೂರು: ಬಿ. ಎಂ. ಶ್ರೀ. ಪ್ರತಿಷ್ಠಾನ.
4. ಮೈಸೂರು ವಿಶ್ವವಿದ್ಯಾನಿಲಯ, (1983), ಕನ್ನಡ ಗ್ರಂಥಸೂಚಿ 5ನೇ ಸಂಪುಟ–ಕಾದಂಬರಿ, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.
5. ವೆಂಕಟೇಶ ಸಾಂಗಲಿ, (1999), ಸಿರಿಗನ್ನಡ ಗ್ರಂಥಕರ್ತರ ಕೋಶ ಸಂಪುಟ–1, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
6. ಭಾನುಮತಿ ವೈ.ಸಿ., (2022), ಗ್ರಂಥಸಂಪಾದನೆ ಅಧ್ಯಯನದ ನೆಲೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಅಕಾಡೆಮಿ.